## ಕರ್ನಾಟಕ ಲೋಕಾಯುಕ್ತ

ಸಂಖ್ಯೆ. ಕಂಪ್ಲೆಂಟ್:ಉಪಲೋಕ್/ಜಿಎಲ್‌ಬಿ-8658/2011/ಎ.ಆರ್.ಇ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:26.03.2021

### ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: 1) ಶ್ರೀ ವೆಂಕಟಪ್ಪ, ಅಧ್ಯಕ್ಷರು, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು, 2ನೇ ಎದುರುದಾರರು 2) ಶ್ರೀ ಭೀಮಾರೆಡ್ಡಿ, ಕಾರ್ಯದರ್ಶಿ, ಚಪ್ಪೆಟ್ಲಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, 3ನೇ ಎದುರುದಾರರು, 3) ಶ್ರೀ ಶರಣಪ್ಪ, ಸಹಾಯಕ ಅಭಿಯಂತರರು, ಜಿ.ಪಂ. ಕಛೇರಿ ಯಾದಗಿರಿ. 4ನೇ ಎದುರುದಾರರು, ಮತ್ತು 4) ಶ್ರೀಮತಿ ಬಸಮ್ಮ, ಹಿಂದಿನ ಅಧ್ಯಕ್ಷರು, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು, 5ನೇ ಎದುರುದಾರರು ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ವರ್ತನೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

---

1. ಶ್ರೀ ಭೀಮಾರೆಡ್ಡಿ ಬಿನ್ ಸಾಯಿರೆಡ್ಡಿ ಮಾಲಿಪಾಟೀಲ್, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) 1) ನೃಪತುಂಗಾಚಾರ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಪ್ಪೆಟ್ಲಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, (ಮೃತಹೊಂದಿರುತ್ತಾರೆ), 2) ಶ್ರೀ ವೆಂಕಟಪ್ಪ, ಅಧ್ಯಕ್ಷರು, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು, 3) ಶ್ರೀ ಭೀಮಾರೆಡ್ಡಿ, ಕಾರ್ಯದರ್ಶಿ, ಚಪ್ಪೆಟ್ಲಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, 4) ಶ್ರೀ ಶರಣಪ್ಪ, ಸಹಾಯಕ ಅಭಿಯಂತರರು, ಜಿ.ಪಂ. ಕಛೇರಿ ಯಾದಗಿರಿ ಮತ್ತು 5) ಶ್ರೀಮತಿ ಬಸಮ್ಮ, ಹಿಂದಿನ ಅಧ್ಯಕ್ಷರು, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು, 6) ಶ್ರೀ ಚುಕ್ಕಪ್ಪ, ಮಾಜಿ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ, ಯಾದಗಿರಿ 5ನೇ ಎದುರುದಾರರು ತಹಶೀಲ್ದಾರರು, ದೇವದುರ್ಗ ಇವರ (ಇನ್ನು ಮುಂದೆ '1' ರಿಂದ '6'ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ವಿರುದ್ಧ, ಅವರ ದುರ್ನಡತೆಯ ಬಗ್ಗೆ ಆರೋಪಿಸಿ ದೂರು ಸಲ್ಲಿಸಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯಿದೆ, 1987ರ ಕಲಂ 9ರನ್ವಯ ತನಿಖೆಯನ್ನು ತೆಗೆದುಕೊಳ್ಳಲಾಗಿದೆ.

2. ದೂರುದಾರರ ಹೇಳಿಕೆಯಂತೆ, 2011ರಲ್ಲಿ ಚಪ್ಪೆಟ್ಲಾ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ನೃಪತುಂಗಚಾರ್‌ರವರು ಒಂದನೇ ಎದುರುದಾರರಿದ್ದು ಇದೇ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದ ಶ್ರೀ ವೆಂಕಟಪ್ಪ, ಅವರು 2ನೇ ಎದುರುದಾರರು ಆಗಿದ್ದು, ಇದೇ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯವರಾದ ಶ್ರೀ ಭೀಮಾರೆಡ್ಡಿ ಇವರು 3ನೇ ಎದುರುದಾರರು ಆಗಿದ್ದು, ಯಾದಗಿರಿ ಜಿಲ್ಲಾ ಪಂಚಾಯಿತಿ ಕಛೇರಿಯ ಸಹಾಯಕ ಅಭಿಯಂತರರಾದ ಶ್ರೀ ಶರಣಪ್ಪ ಇವರು 4ನೇ ಎದುರುದಾರರು ಆಗಿದ್ದು, ಇದೇ ಗ್ರಾಮ ಪಂಚಾಯಿತಿಯ ಹಿಂದಿನ ಅಧ್ಯಕ್ಷರಾದ ಶ್ರೀಮತಿ ಬಸಮ್ಮ ರವರು 5ನೇ ಎದುರುದಾರರು ಆಗಿದ್ದು ಹಾಗೂ ಯಾದಗಿರಿ ಈ ತಾಲ್ಲೂಕು ಪಂಚಾಯಿತಿಯ ಹಿಂದಿನ ಸದಸ್ಯರಾಗಿದ್ದ ಚುಕ್ಕಪ್ಪರವರನ್ನು 6ನೇ ಎದುರುದಾರರಾಗಿ ಈ ದೂರಿನಲ್ಲಿ ನಮೂದಿಸಿರುತ್ತಾರೆ.

3. ದೂರುದಾರರು ತಮ್ಮ ದೂರಿನಲ್ಲಿ 2009–2010 ಹಾಗೂ 2010–11ನೇ ಸಾಲಿನ ಕ್ರಿಯಾಯೋಜನೆಯ ಅಂದಾಜು ಮೊತ್ತ ರೂ.13190.00 ಲಕ್ಷಗಳ ಹಣ ಇಟ್ಟುಕೊಂಡು ಮುಂಗಡ ಹಣದಲ್ಲಿ ಕಾಮಗಾರಿಗಳನ್ನು ಮಾಡದೇ ಎಂ.ಐ.ಎಸ್. ಮಾಡಿ ಹಣವನ್ನು ಪಂಚಾಯಿತ್ ಅಭಿವೃದ್ಧಿ ಅಧಿಕಾರಿಗಳೂ ಹಾಗೂ ಗ್ರಾಮಪಂಚಾಯಿತಿ ಅಧ್ಯಕ್ಷರು ಸೇರಿಕೊಂಡು ಗುರುಮಠಕಲ್‌ನ ಕೆಜಿಬಿ ಬ್ಯಾಂಕಿನಲ್ಲಿ ಡ್ರಾ ಮಾಡಿ ಅವ್ಯವಹಾರ ಮಾಡಿರುತ್ತಾರೆಂದು ಹಾಗೂ ಇದೇ ವರ್ಷಗಳ ಎನ್.ಆರ್.ಇ.ಜಿ.ಇ. ಕ್ರಿಯಾಯೋಜನೆ ಪ್ರಕಾರ ಕೆಲಸಮಾಡದೇ ಸ್ವಲ್ಪ ಕೆಲಸಮಾಡಿ ಅವ್ಯವಹಾರ ಮಾಡಿರುತ್ತಾರೆಂದು ಆರೋಪಿಸಿರುತ್ತಾರೆ.

4. 2009–10 ರಿಂದ 2011–12ನೇ ಸಾಲಿನ ಸೆಪ್ಟೆಂಬರ್ ತಿಂಗಳವರೆಗೆ ಕೂಲಿಕಾರ್ಮಿಕರ ಹೆಸರಿನಲ್ಲಿ ಇಂಟರ್‌ನೆಟ್ ಮುಖಾಂತರ ಹಣ ತೋರಿಸಿದ್ದು ಇದನ್ನು ಪ್ರತಿ ಕೂಲಿಕಾರ್ಮಿಕರ ಖಾತೆಗೆ ಕೆಜಿಬಿ ಗುರುಮಠಕಲ್ ಮತ್ತು ಅಂಚೇ ಕಛೇರಿಯಲ್ಲಿ ಹಾಕದೇ ತಮ್ಮ ವೈಯುಕ್ತಿಕ ಖಾತೆಗೆ ಅಂದರೆ ದಲ್ಲಾಳಿಗಳ ಖಾತೆಗೆ ಹಾಕಿಕೊಂಡು ಅವ್ಯವಹಾರ ಎಸಗಿರುತ್ತಾರೆಂದು ಆರೋಪಿಸಿರುತ್ತಾರೆ.

5. ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚಿನ ಉದ್ಯೋಗ ಚೀಟಿಯನ್ನು ನೀಡಿ ಅವ್ಯವಹಾರ ಎಸಗಿದ್ದು, ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ವೆಂಕಟಪ್ಪ ಇವರಿಗೆ ಉದ್ಯೋಗ ಚೀಟಿ ಸಂ. 6ನ್ನು ನೀಡಿ ಕೂಲಿ ಕಾರ್ಮಿಕನೆಂದು ಕೆಲಸ ಮಾಡಿದಂತೆ ಹಾಗೂ

ಅದೇ ರೀತಿ ಗ್ರಾಮ ಪಂಚಾಯಿತಿಯ ಸದಸ್ಯನಾದ ಸಕ್ಕಿಬಾಯಿ ಕೋಂ.ಚಂದರ ಇವರ ಹೆಸರಿನಲ್ಲಿ 2 ಉದ್ಯೋಗ ಚೀಟಿಯನ್ನು ನೀಡಿ ಅವ್ಯವಹಾರ ಎಸಗಿರುತ್ತಾರೆ ಎಂಬ ಆರೋಪ ಮಾಡಿರುತ್ತಾರೆ.

6. ಅದೇ ರೀತಿ ಮಾಸಮ್ಮ ಕೋಂ ಮಾಸಪ್ಪ ಮೈಲಾರಿ ಇವರ ಕುಟುಂಬಕ್ಕೆ 3 ಉದ್ಯೋಗ ಚೀಟಿಗಳನ್ನು ನೀಡಿದ್ದು ಅಂದರೆ ಕುಟುಂಬ ಸಂಖ್ಯೆ, 57, ಕುಟುಂಬ ಸಂಖ್ಯೆ, 905, 904ನ್ನು ನೀಡಿ ಅವ್ಯವಹಾರ ಎಸಗಿರುತ್ತಾರೆ.

7. ಮಾಸಪ್ಪನಾಯಕನ ಮಗ ಚುಕ್ಕಪ್ಪ ಇವರು 2005 ರಿಂದ 2009-10ರವರೆಗೆ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿದ್ದು ಇವರು ಉದ್ಯೋಗ ಚೀಟಿ 100ನ್ನು ಹೊಂದಿದ್ದು, ಇವರು ತಾಲ್ಲೂಕು ಪಂಚಾಯಿತಿ ಸದಸ್ಯರಾಗುವ ಮುಂಚಿತವಾಗಿ ಸಾಮಾನ್ಯ ಕುಟುಂಬದವರಾಗಿದ್ದು ಇವರ ಹೆಂಡತಿ ವಸಂತಮ್ಮ ಇವರು ಚೆಪ್ಪೆಟ್ಲಾ ಶಾಲೆಗೆ ಬಿಸಿಯೂಟದ ಮುಖ್ಯ ಅಡುಗೆಯವರಾಗಿದ್ದು, ಇವರ ಮಗಳು ದೀಪರಾಣಿ, ಪಿಡಿ.ಎ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್‌ನಲ್ಲಿ ಇಂಜಿನಿಯರ್ ವಿದ್ಯಾಭ್ಯಾಸ ಮಾಡುತ್ತಿದ್ದು, ಇವರುಗಳ ಹೆಸರಿನಲ್ಲಿ ಕೂಲಿ ಹಣ ಪಾವತಿಸಿಕೊಂಡಿರುತ್ತಾರೆ. ಇದಲ್ಲದೇ ಇವರ ಅಣ್ಣ ದೇವಪ್ಪ ತೀರಿಕೊಂಡಿದ್ದರೂ ಸಹ ಇವರ ಅಣ್ಣನ ಹೆಂಡತಿ ನಾಗಮ್ಮನ ಹೆಸರಿನಲ್ಲಿ ಉದ್ಯೋಗ ಚೀಟಿ ಹೊಂದಿರುತ್ತಾರೆ ಹಾಗೂ ತೀರಿಕೊಂಡವರ ಹೆಸರಿನಲ್ಲಿ ಹಣ ಪಾವತಿಸಿಕೊಂಡಿರುತ್ತಾರೆ. ಇವರು 2005ರಿಂದ ಚೆಪ್ಪೆಟ್ಲಾ ಪಂಚಾಯಿತಿಯ ಕಾಮಗಾರಿಗಳನ್ನು ಮಾಡದೇ ದಬ್ಬಾಳಿಕೆ ಮಾಡಿ ಪಂಚಾಯಿತಿಯ ಹಣ ಅವ್ಯವಹಾರ ಮಾಡಿರುತ್ತಾರೆಂದು ಹಾಗೂ ರೂ.80 ಲಕ್ಷದಿಂದ 1 ಕೋಟಿಯವರೆಗೂ ಪಂಚಾಯಿತಿಯ ಉದ್ಯೋಗ ಖಾತ್ರಿಯ ಯೋಜನೆಯಡಿಯಲ್ಲಿ ಅವ್ಯವಹಾರ ಮಾಡಿ ಆಸ್ತಿ ಮಾಡಿಕೊಂಡಿದ್ದು ಅಂದರೆ 4 ಎಕರೆ ತರಿ ಜಮೀನು ಜೆ.ಸಿ.ಬಿ. ಟ್ರಾಕ್ಟರ್, ಟಾಟಾ ಸುಮೋ ವಾಹನಗಳನ್ನು ಹೊಂದಿದ್ದು ಇದಲ್ಲದೇ ಚೆಪ್ಪೆಟ್ಲಾ ಗ್ರಾಮಪಂಚಾಯಿತಿಯ ಕೆಲವು ಕೂಲಿಕಾರರ ಉದ್ಯೋಗ ಚೀಟಿಗಳನ್ನು ಮತ್ತು ಪಾಸ್ ಪುಸ್ತಕಗಳು ಇವರು ಮನೆಯಲ್ಲಿರುತ್ತದೆಂದು ಆರೋಪಿಸಿದ್ದು, ಇವರು ಈ ದೂರಿನ 6ನೇ ಎದುರುದಾರರು ಇರುತ್ತಾರೆ.

8. ತಡಗೋಡೆ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಚೆಪ್ಪೆಟ್ಲಾ ಗ್ರಾಮದ ಶಾಲೆಯ ಹತ್ತಿರ ತಡೆಗೋಡೆ ನಿರ್ಮಾಣ ಮಾಡದೇ ಕಾಮಗಾರಿ ಸಂಖ್ಯೆ 6ರಲ್ಲಿ ಕಾಮಗಾರಿ ಆಗಿಲ್ಲದೇ ಇದ್ದರು, ಕಾಮಗಾರಿ ಆಗಿರುತ್ತದೆಂದು ತೋರಿಸಿರುತ್ತಾರೆ.

9. ಮುಂದುವರೆದು ತಮ್ಮ ದೂರಿನಲ್ಲಿ ಕಮಲಾನಗರದಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ಸಂಬಂಧಪಟ್ಟಂತೆ 3-4 ಬಾರಿ ಖರ್ಚು ಹಾಕಿರುತ್ತಾರೆಂದು , ಒಂದು ಬಾರಿ ಮಾಡಿರುವ ಕಾಮಗಾರಿಯೇ ಕಳಪೆ ಮಟ್ಟದ ಕಾಮಗಾರಿ ಆಗಿರುತ್ತದೆಂದು ಹೇಳಿರುತ್ತಾರೆ. ಇದಲ್ಲದೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ಮಾಡದೇ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆಂದು ಹಾಗೂ ಹಿಮಲಾಪುರ ಗ್ರಾಮದ ಸರ್ವೆ ನಂ. ಜಮೀನುಗಳಿಗೆ ಒಡ್ಡು ಹಾಕಿದ್ದಾಗಲೀ, ಜಮೀನು ಮಟ್ಟವನ್ನು ಮಾಡದೇ ಹಾಗೂ ಚೆಪೇಟ್ಲಾ ಗ್ರಾಮದ ಜಮೀನು ಅಭಿವೃದ್ಧಿ ಕೈಗೊಳ್ಳದೇ ಖರ್ಚು ತೋರಿಸಿ ಹೆಚ್ಚಿನ ಹಣ ದುರುಪಯೋಗ ಮಾಡಿರುತ್ತಾರೆಂದು ದೂರಿನಲ್ಲಿ ಆರೋಪಿಸಿರುತ್ತಾರೆ.

10. ತಮ್ಮ ದೂರಿನಲ್ಲಿ ಮುಂದುವರೆದು ಚೆಪೇಟ್ಲಾ ಗ್ರಾಮದಿಂದ ಎಂ.ಟಿ.ಪಲ್ಲಿಯ ಸಂಪರ್ಕ ರಸ್ತೆ ನಿರ್ಮಾಣ ಮಾಡಿದ್ದೇವೆ ಎಂದು ಒಂದೇ ಕೆಲಸಕ್ಕೆ ಹಲವು ಹೆಸರುಗಳನ್ನು ನಮೂದಿಸಿ ಖರ್ಚು ಹಾಕಿ ಹಣ ತೆಗೆದುಕೊಂಡಿರುವುದು ಕಂಡುಬರುತ್ತದೆಂದು ಆರೋಪಿಸಿರುತ್ತಾರೆ.

11. ಮುಂದುವರೆದು ಚೆಪೇಟ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 26 ಚೆಕ್ ಡ್ಯಾಂಗಳು ನಿರ್ಮಾಣ ಮಾಡಿದಂತೆ ಹಣ ಖರ್ಚು ಹಾಕಿದ್ದು, ಇಷ್ಟು ಕಾಮಗಾರಿಗಳು ಆಗಿರುವುದಿಲ್ಲವೆಂದು ಹಾಗೂ ಆಗಿರುವಂತಹ ಕೆಲವು ಕಾಮಗಾರಿಗಳು ಸಹ ಕಳಪೆಮಟ್ಟದ ಕಾಮಗಾರಿಗಳು ಆಗಿದೆಯೆಂದು ಹಾಗೂ ಚೆಪೇಟ್ಲಾ ಗ್ರಾಮದ ಸರ್ವೆನಂಬರು ಜಮೀನುಗಳಲ್ಲಿ ಯಾವುದೇ ಗೋಕಟ್ಟೆ ನಿರ್ಮಾಣ ಆಗಿರುವುದಿಲ್ಲವೆಂದು **ಈ ಕಾಮಗಾರಿಯ ಹೆಸರಿನಲ್ಲಿ ಸುಮಾರು 6 ಲಕ್ಷ ರೂಗಳನ್ನು ದುರುಪಯೋಗಮಾಡಿಕೊಂಡಿರುತ್ತಾರೆಂದು ಆರೋಪಿಸಿರುತ್ತಾರೆ.**

12. ಆದ್ದರಿಂದ ಸಂಬಂಧಪಟ್ಟ ಎದುರುದಾರರ ವಿರುದ್ಧ ಅಂದರೆ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಪಂಚಾಯಿತಿಗೆ ಸಂಬಂಧಪಟ್ಟ ಕಿರಿಯ ಅಭಿಯಂತರ ಇವರ ವಿರುದ್ಧ ತನಿಖೆ ಮಾಡಿ ಕ್ರಮಜರುಗಿಸಬೇಕೆಂದು ದೂರಿನಲ್ಲಿ ಕೋರಿರುತ್ತಾರೆ.

13. ಇದಲ್ಲದೇ, ಇದೇ ದೂರುದಾರರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ. ಯಾದಗಿರಿರವರಿಗೆ ಸಹ ದೂರು ಸಲ್ಲಿಸಿದ್ದು ಕಂಡುಬರುತ್ತದೆ. ನಂತರ ಈ ದೂರಿನ ಬಗ್ಗೆ

ಯಾದಗಿರಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಚಪ್ಪೆಟ್ಲಾ ಗ್ರಾಮಕ್ಕೆ ಭೇಟಿ ನೀಡಿ ತನಿಖೆ ಮಾಡಿ ವರದಿ ಸಲ್ಲಿಸುವಂತೆ ತಿಳಿಸಿದ್ದು ಇದರನ್ವಯ ಯಾದಗಿರಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯು ದಿ: 12.12.2011 ರಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ವರದಿ ಸಲ್ಲಿಸಿರುವುದು ಕಂಡು ಬರುತ್ತದೆ ಇದು ಕಡತ ಪುಟಸಂಖ್ಯೆ: 310ರಿಂದ 313ರವರೆಗೆ ಇರುತ್ತದೆ. (ಅನುಬಂಧ-1). ಈ ವರದಿಯಲ್ಲಿಯೂ ಸಹ ಫಿರ್ಯಾದಿಯು ಹೇಳಿರುವ ಕೆಲವು ಅಂಶಗಳನ್ನು ಪುನರುಚ್ಚರಿಸಿರುವುದು ಕಂಡು ಬರುತ್ತದೆ.

14. ಇದಲ್ಲದೆ, ಯಾದಗಿರಿ ತಾಲ್ಲೂಕು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ತಾವು ಯಾದಗಿರಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ನೀಡಿರುವ ವರದಿಯಲ್ಲಿ ಈ ಕೆಳಕಂಡಂತೆ ಎದುರುದಾರರು ಲೋಪದೋಷಗಳನ್ನು ಎಸಗಿರುತ್ತಾರೆಂದು ಆರೋಪಮಾಡಿರುವುದು ಕಂಡಬರುತ್ತದೆ.

(ಎ) ಅಂದರೆ ಚಪ್ಪೇಟ್ಲಾ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಸರ್ಕಾರದ ನಿರ್ದೇಶನದಂತೆ ಜಾಬ್ ಕಾರ್ಡ್ ವ್ಯಾಲಿಡೇಷನ್ ಮಾಡದೇ ಕೆಲಸ ನೀಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆಂದು ತಿಳಿಸಿರುತ್ತಾರೆ.

(ಬಿ) ಎನ್.ಎಂ. ಆರ್ ತೆಗೆಯುವಾಗ ಕೂಲಿಕಾರ್ಮಿಕರ ಹತ್ತಿರ ಜಾಬ್‌ಕಾರ್ಡ್ ಇರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಎನ್. ಎಂ.ಆರ್. ತೆಗೆಯಬೇಕಾಗಿದ್ದು, ಆದರೆ ಅವರು ಯಾವುದೇ ಪರಿಶೀಲನೆ ಮಾಡದೆ ಎನ್. ಎಂ. ಆರ್. ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ.

(ಸಿ) ಚಪ್ಪೇಟ್ಲ ಗ್ರಾಮ ಪಂಚಾಯಿತಿಯಲ್ಲಿನ ದಾಖಲಾತಿಗಳನ್ನು ಪರಿಶೀಲಿಸುವಾಗ ಯಾವುದೇ ಕಾಮಗಾರಿಗಳಿಗೆ ಪ್ರತ್ಯೇಕ ಕಡತ ಇಟ್ಟಿರುವುದಿಲ್ಲ. ದೂರಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಲು ತಿಳಿಸಿದರು ಸಹ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

(ಡಿ) ಒಂದೇ ಹೆಸರಿನವರು ಬೇರೆ ಬೇರೆ ಮಸ್ಟರ್ ರೋಲ್‌ನಲ್ಲಿ ಕೆಲಸ ಮಾಡಿರುವುದು ಕಂಡು ಬರುತ್ತದೆ.

(ಇ) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಯವರು ನಿಯಮಾನುಸಾರ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಜಾಬ್ ಕಾರ್ಡ್ ರಿ-ವ್ಯಾಲಿಡೇಷನ್ ಮಾಡದೆ ಹಿಂದೆ ಎಂ.ಐ.ಎಸ್ ನಲ್ಲಿ ಲಭ್ಯವಿದ್ದ ಕೂಲಿಕಾರರ ಹೆಸರನ್ನು ಎನ್. ಎಂ.ಆರ್. ನಲ್ಲಿ ಸೇರಿ ಹಣ ಪಾವತಿಸಿರುವುದು ಕಂಡು ಬರುತ್ತದೆ.

(ಎಫ್) ಪ್ರವಾಹ ನಿಯಂತ್ರಣ ತಡೆಗೋಡೆಯ ಕಾಮಗಾರಿಯಲ್ಲಿ ಕೂಲಿಕಾರ್ಮಿಕರು ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಯಾವುದೇ ಫೋಟೋ ದಾಖಲೆಯನ್ನು ಸಹ ಸಲ್ಲಿಸಿರುವುದಿಲ್ಲ.

15. ಇದರಿಂದ ಈ ಎಲ್ಲಾ ಲೋಪದೋಷಗಳಿಗೆ ಪಂಚಾಯತ ಅಭಿವೃದ್ದಿ ಅಧಿಕಾರಿ, ಕಿರಿಯ ಅಭಿಯಂತರ, ಹಾಗೂ ಚಪೇಟ್ಲಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಈ ಮೇಲೆ ತಿಳಿಸಿದಂತೆ ಗ್ರಾಮ ಪಂಚಾಯಿತಿಯ ಯೋಜನೆಯ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪವೆಸಗಿರುತ್ತಾರೆ. ಆದ್ದರಿಂದ ಸದರಿಯವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲು ಕೋರಿ ಯಾದಗಿರಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರು ಯಾದಗಿರಿ ತಾಲ್ಲೂಕು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮೇಲೆ ನಮೂದಿಸಿರುವ ಅನುಬಂಧ (1)ರಂತೆ ವರದಿ ಸಲ್ಲಿಸಿರುತ್ತಾರೆ. "ಈ ವರದಿಯನ್ವಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶದ ಮೇರೆಗೆ **ಈ ಫಿರ್ಯಾದಿನ 1ನೇ ಎದುರುದಾರರಾದ ನೃಪತುಂಗಾಚಾರ್ಯ ಇವರ** ವಿರುದ್ಧ 2 ಆರೋಪಗಳನ್ನು ಮಾಡಿ **ದೋಷಾರೋಪಣಾ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ. ಯಾದಗಿರಿ ಇವರಿಗೆ ಸಲ್ಲಿಸಿದ್ದು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ದಿ: 12.4.2012ರಂದು ತಾ.ಪಂಯಾ/ಸಿಬ್ಬಂದಿ/ಪಿಡಿಓ/ ದೋ. ಪಟ್ಟಿ/2011/2012 ಸಲ್ಲಿಸಿರುತ್ತಾರೆ.** ಇದು ಕಡತದ ಪುಟಸಂಖ್ಯೆ: 319ರಿಂದ 316 ರಲ್ಲಿ ಅನುಬಂಧ 2 ಆಗಿರುತ್ತದೆ. ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ. ಯಾದಗಿರಿ ಇವರು ಈ ಆರೋಪಗಳಿಗೆ ಸಂಬಂಧಪಟ್ಟಂತೆ, **ಯಾದಗಿರಿಯ ಜಿಲ್ಲಾ ಜಲಾನಯನ ಅಧಿಕಾರಿಯನ್ನು ವಿಚಾರಣಾಧಿಕಾರಿಯಾಗಿ** ನೇಮಕ ಮಾಡಿದ್ದು, ಇವರು ವಿಚಾರಣಾ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಜಿಜಾಅಆಯಾ/ ವಿಚಾರಣೆ/ 10/2012–2013/163 ದಿ:23.7.2013ರಂದು ಸಲ್ಲಿಸಿರುತ್ತಾರೆ. ಈ ವಿಚಾರಣೆಯನ್ನು ಈ ಫಿರ್ಯಾದಿನ 1ನೇ ಎದುರುದಾರರಾದ ಚಪೇಟ್ಲಾ ಗ್ರಾಮ ಪಂಚಾಯತ್ ಅಭಿವೃದ್ದಿ ಅಧಿಕಾರಿಯಾದ ಶ್ರೀ ನೃಪತುಂಗಚಾರ್ಯರ ವಿರುದ್ಧ ಮಾಡಿದ್ದು, ಇದರಲ್ಲಿ, ಇವರ ವಿರುದ್ಧ **ಇದ್ದ ಆರೋಪಗಳು ರುಜುವಾತು ಆಗಿರುವುದಿಲ್ಲವೆಂದು** ವರದಿ ನೀಡಿರುತ್ತಾರೆ. ಈ ವರದಿಯನ್ನು ಸ್ವೀಕರಿಸುವ ನಡುವೆಯೇ ಸದರಿ ಎದುರುದಾರರಾದ ಶ್ರೀ ನೃಪತುಂಗಚಾರ್ಯರ ದಿ: **27.7.2013ರಂದು ಮೃತಪಟ್ಟಿರುತ್ತಾರೆಂದು** ಯಾದಗಿರಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ತಿಳಿಸಿರುವುದು ಕಂಡುಬರುತ್ತದೆ.

16. ಈ ದೂರಿನ ಅಂಶಗಳನ್ನು ಪರಿಶೀಲಿಸಲಾಗಿ, 2009–10 ಹಾಗೂ 2010–11ನೇ ಸಾಲಿನ ಕ್ರಿಯಾಯೋಜನೆಯ ಅಂದಾಜು ಮೊತ್ತ ರೂ.13,190.00 ಲಕ್ಷಗಳು ಎಂದು ಇದ್ದು ಮುಂಗಡ ಹಣದಲ್ಲಿ ಕಾಮಗಾರಿಗಳನ್ನು ಕೈಗೊಳ್ಳದೇ ಕೆಜಿಪಿ ಬ್ಯಾಂಕ್ ಗುರುಮಠಕಲ್‌ನಲ್ಲಿ ಹಣ ಡ್ರಾ ಮಾಡಿ ಅವ್ಯವಹಾರ ಮಾಡಿರುತ್ತಾರೆಂದು ನಮೂದು ಇರುತ್ತದೆ. ಯಾದಗಿರಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ತಮ್ಮ ವರದಿಯಲ್ಲಿ ನಮೂದಿಸಿರುವ ಲೋಪದೋಷಗಳಿಗೆ ಸಂಬಂಧಪಟ್ಟಂತೆ, 2ರಿಂದ 6 ನೇ ಎದುರುದಾರರ ವಿರುದ್ದ ಯಾವುದೇ ವಿಚಾರಣೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿಯವರು ಮಾಡಿಲ್ಲದಿರುವುದು ಕಂಡುಬರುತ್ತದೆ. ಹಾಗೂ ಇದೇ ದೂರುದಾರರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿಯವರಿಗೆ ನೀಡಿರುವ ದೂರಿನಲ್ಲಿ ಎಲ್ಲಾ ಎದುರುದಾರರ ವಿರುದ್ಧ ಕೆಳಕಂಡಂತೆ ಆರೋಪ ಮಾಡಿದ್ದು ಅಂದರೆ:

(ಅ) ಕಮಲಾನಗರದ ಶಾಲೆಗೆ ತಡೆಗೋಡೆ ನಿರ್ಮಾಣ ಎಂದು 3–4 ಬಾರಿ ಖರ್ಚು ಹಾಕಿರುತ್ತಾರೆ. ಈ ತಡೆಗೋಡೆ ಕಳಪೆ ಮಟ್ಟದ ಕಾಮಗಾರಿ ಆಗಿರುತ್ತದೆ.

(ಆ) ಯೋಜನೆಯ ಕ್ರ.ಸ. 6ರಲ್ಲಿ ನಮೂದಿಸಿರುವ ಚಪ್ಪಟ್ಲಾ ಗ್ರಾಮದಲ್ಲಿ ಶಾಲೆಯ ಹತ್ತಿರ ತಡೆಗೋಡೆ ನಿರ್ಮಾಣ ಎಂದು ತೋರಿಸಿದ್ದು ಈ ಕಾಮಗಾರಿ ಆಗಿರುವುದಿಲ್ಲ.

(ಇ) ಇದಲ್ಲದೆ ಈ ಯೋಜನೆಯಲ್ಲಿ ಪರಿಶಿಷ್ಠ ಜಾತಿ ಮತ್ತು ಪ.ವ. ಜಮೀನುಗಳಿಗೆ ಸಂಬಂಧಪಟ್ಟಂತೆ ನೀರವಾರಿ ಸೌಲಭ್ಯವನ್ನು ಒದಗಿಸಲು ಈ ಯೋಜನೆಯಲ್ಲಿ ನಮೂದು ಇದ್ದು , ಈ ಬಗ್ಗೆ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳದೆ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ.

(ಈ) ಜಮೀನು ಅಭಿವೃದ್ದಿ ಮತ್ತು ಗ್ರಾಮಗಳಿಗೆ ಸಂಪರ್ಕ ರಸ್ತೆ ಕಲ್ಪಿಸುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ಜಮೀನಿನ ಅಭಿವೃದ್ದಿ ಕಾಮಗಾರಿಗಳನ್ನು ಅಂದರೆ ಇಮಲಾಪುರ ಗ್ರಾಮದ ಸ.ನಂ.ಗಳಲ್ಲಿ ಒಡ್ಡು ಹಾಕಿದ್ದಾಗಲೀ, ಜಮೀನಿನನ್ನು ಮಟ್ಟ ಮಾಡಿದ್ದಾಗಲೀ ಹಾಗೂ ಚಪ್ಪಟ್ಲಾ ಗ್ರಾಮದ ಜಮೀನಿನ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳದೇ ಎದುರುದಾರರು ಖರ್ಚು ತೋರಿಸುತ್ತಾರೆಂದು ದೂರುದಾರರ ಆರೋಪ ಇರುತ್ತದೆ. ಅದೇ ರೀತಿ ಯದಲಾಪುರ ಗ್ರಾಮದಲ್ಲಿ ತಗ್ಗುಗಳನ್ನು ಮುಚ್ಚಲು ರೂ.1 ಲಕ್ಷ

ಖರ್ಚುತೋರಿಸಿದ್ದು, ಪುನ: ಇದೇ ಕಾಮಗಾರಿ ಖರ್ಚು ತೋರಿಸಿ ಹೆಚ್ಚಿನ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆಂದು ಆರೋಪ ಇದೆ.

(ಉ) ಗ್ರಾಮಾಂತರ ರಸ್ತೆ ಸಂಪರ್ಕಕ್ಕೆ ಸಂಬಂಧಪಟ್ಟಂತೆ ಈ ಯೋಜನೆಯಲ್ಲಿ ಕ್ರ.ಸ. 1, 13, 14 ರಲ್ಲಿ ನಮೂದಿಸಿದ್ದ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳದೇ ಹಣ ದುರುಪಯೋಗ ಮಾಡಿರುತ್ತಾರೆ.

(ಊ) ಕ್ರಮ ಸಂಖ್ಯೆ 8.11 ಮತ್ತು 12 ಅಂದರೆ ಒಂದೇ ಕಾಮಗಾರಿಯನ್ನು ಚಪ್ಪಟ್ಲಾ ಗ್ರಾಮದಿಂದ ಎಂ.ಟಿ.ಪಲ್ಲಿ ಸಂಪರ್ಕ ರಸ್ತೆ ಎಂದು ಇದೇ ರಸ್ತೆಯನ್ನು ಚಪ್ಪಟ್ಲಾ ಗ್ರಾಮದಿಂದ ಎಂ.ಟಿ.ಪಲ್ಲಿ ರಸ್ತೆ ಸುಧಾರಣೆ ಎಂದು ಹಾಗೂ ಪುನ: ಮತ್ತೊಮ್ಮೆ ಚಪ್ಪಟ್ಲಾದಿಂದ ಎಂ.ಟಿ.ಪಲ್ಲಿ ಸಂಪರ್ಕ ರಸ್ತೆ ನಿರ್ಮಾಣ ಎಂದು ಹಾಗೂ ಇದೇ ರಸ್ತೆಗೆ ಚಪ್ಪಟ್ಲಾ ಬಸವರಾಜಪ್ಪ ಹೊಲದಿಂದ ಎಂ.ಟಿ.ಪಲ್ಲಿ ರಸ್ತೆಯೆಂದು **ಅಂದರೆ ಒಂದೇ ಕೆಲಸಕ್ಕೆ ಅನೇಕ ಹೆಸರುಗಳನ್ನು ನಮೂದಿಸಿ ಹಣ ದುರುಪಯೋಗಮಾಡಿರುತ್ತಾರೆಂದು ಆರೋಪ ಇರುತ್ತದೆ.**

(ಋ) ರಸ್ತೆ ಬದಿ ಗುಂಡಿತೋಡುವುದು ನೆಡುತೋಪು ಹಚ್ಚುವುದಾಗಲೀ ಮನೆ ಮುಂದೆ ತೆಂಗಿನ ಗಿಡಗಳನ್ನು ನೆಡುವುದಾಗಲೀ ಜೈವಿಕ ಇಂಧನ ತಗ್ಗುಗಳಾಗಲೀ, ಈ ರೀತಿಯ ಯಾವುದೇ ಕಾಮಗಾರಿಯನ್ನು ಮಾಡದೇ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ದೂರಿನಲ್ಲಿ ನಮೂದು ಇರುತ್ತದೆ.

(ೠ) ಇದೇ ಯೋಜನೆಯಲ್ಲಿ **ಚಪ್ಪಟ್ಲಾ ಗ್ರಾಮದಲ್ಲಿ 26 ಚೆಕ್** ಡ್ಯಾಂಗಳನ್ನು ನಿರ್ಮಿಸಿದ್ದಾರೆಂದು ಖರ್ಚು **ತೋರಿಸಿದ್ದು** ಇಷ್ಟು ಸಂಖ್ಯೆ ಕಾಮಗಾರಿಗಳು ಆಗಿಲ್ಲವೆಂದು, ಆಗಿರುವಂತಹ ಕಾಮಗಾರಿಗಳು **ಕಳಪೆ ಗುಣಮಟ್ಟದ** ಕಾಮಗಾರಿಗಳು ಆಗಿರುತ್ತವೆ.

(ಎ) ಇದಲ್ಲದೆ ಚಪ್ಪಟ್ಲಾ ಗ್ರಾಮದಲ್ಲಿ ಯಾವುದೇ ಗೋಕಟ್ಟೆ ನಿರ್ಮಾಣವಾಗಿಲ್ಲದಿದ್ದರೂ ಈ ಕಾಮಗಾರಿ **ಹೆಸರಿನಲ್ಲಿ ರೂ. 6 ಲಕ್ಷ ಗಳನ್ನು ದುರುಪಯೋಗಪಡಿಸಿರುತ್ತಾರೆಂದು** ದೂರಿನಲ್ಲಿ ನಮೂದಿಸಿರುತ್ತಾರೆ.

(ಏ) ಈ ಯೋಜನೆಯಲ್ಲಿ ಕಿರು ನೀರಾವರಿ ಕಾಮಗಾರಿಗೆ ಸಂಬಂಧಿಸಿದಂತೆ ಹಣ ನಿಗದಿಪಡಿಸಿರುವುದನ್ನು ಯಾವುದೇ ಕಾಮಗಾರಿ ಆಗದೆ ಈ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದು ದೂರಿನಲ್ಲಿ ನಮೂದಿಸಿರುತ್ತಾರೆ.

17. ಈ ಮೇಲಿನ ಆರೋಪಗಳಿಗೆ ಸಂಬಂಧಪಟ್ಟಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಯಾದಗಿರಿ **ಜಿಲ್ಲಾ ಪಂಚಾಯತ್‌ರವರು ಯಾವುದೇ** ತನಿಖೆಯನ್ನು ಎದುರುದಾರರುಗಳ ವಿರುದ್ಧ ಮಾಡಿಲ್ಲದಿರುವುದು ಕಂಡುಬರುತ್ತದೆ.

18. 2ರಿಂದ 5ನೇ ಎದುರುದಾರರಿಗೆ ಕಾಲಾವಕಾಶ ನೀಡಿದರೂ ಯಾವುದೇ ಆಕ್ಷೇಪಣೆಗಳನ್ನು ಫಿರ್ಯಾದಿನ ಅಂಶಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಿರುವುದಿಲ್ಲ. 6ನೇ ಎದುರುದಾರರ ಚುಕ್ಕಪ್ಪ ಅಂದರೆ ಯಾದಗಿರಿ ತಾಲ್ಲೂಕು ಪಂಚಾಯಿತಿಯ ಹಿಂದಿನ ಸದಸ್ಯರೆಂದು ಈ ದೂರಿನಲ್ಲಿ ನಮೂದಿಸಿದ್ದು, ಇವರ ವಿರುದ್ಧ ಸಹ ದೂರಿನಲ್ಲಿ **ಆರೋಪಗಳು ಇದ್ದು ಇವರು ದಿ: 9.6.2019ರಂದು ಮರಣಹೊಂದಿರುತ್ತಾರೆಂದು** ಯಾದಗಿರಿ ಲೋಕಾಯುಕ್ತ ಪೋಲಿಸರು ವರದಿ ಸಲ್ಲಿಸಿ ಮರಣ ಪ್ರಮಾಣಪತ್ರವನ್ನು ಸಹ ಹಾಜರುಪಡಿಸಿರುತ್ತಾರೆ.

19. 1ನೇ ಎದುರುದಾರರಾದ ಚೆಪೆಟ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ **ಶ್ರೀ ನೃಪತುಂಗಚಾರ್ಯರವರು ದಿ: 27.7.2013ರಂದು ಮೃತಪಟ್ಟಿರುತ್ತಾರೆಂದು** ಇವರ ಮರಣ **ಪ್ರಮಾಣ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ , ಯಾದಗಿರಿ ಜಿಲ್ಲಾ ಪಂಚಾಯತ್‌ರವರು ಮಾನ್ಯ ಉಪನಿಯಂತ್ರಕರು, (ಲೆಕ್ಕಪತ್ರ) ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಪತ್ರ ಕಳುಹಿಸಿ ತಿಳಿಸಿರುವುದು ಕಂಡುಬರುತ್ತದೆ.** ಈ 1ನೇ ಎದುರುದಾರರಿಗೆ ಸಂಬಂಧಪಟ್ಟಂತೆ ಸಹ ಜಿಲ್ಲಾ ಜಲಾನಯನ ಅಧಿಕಾರಿ, ಯಾದಗಿರಿ ಇವರು ಮಾಡಿರುವ ವಿಚಾರಣೆಯಲ್ಲಿ ಜಿಜಾಅಆಯಾ/ವಿಚಾರಣೆ/10/2012-2013/163 ದಿ:23.7.2013ರ ವಿಚಾರಣಾ ವರದಿಯಲ್ಲಿ ಮೇಲೆ ನಮೂದಿಸಿರುವ ಫಿರ್ಯಾದಿನ ಆರೋಪಗಳ ಬಗ್ಗೆ ಯಾವುದೇ ತನಿಖೆಯಾಗಿರುವುದು ಕಂಡುಬಂದಿಲ್ಲ.

20. 2 ರಿಂದ 5ನೇ ಎದುರುದಾರರು ದೂರಿನ ಅಂಶಗಳಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದರೆ, 4ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿ, ಪತ್ರ ನೀಡಿದ್ದು ಇದರಲ್ಲಿ 2009-10 ಹಾಗೂ 2010-11ನೇ ಸಾಲಿನ ಯಾದಗಿರಿ ತಾಲ್ಲೂಕಿನ ಚಪ್ಪೆಟ್ಲಾ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಜರುಗಿಸಲಾದ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಗಳಲ್ಲಿ ಅವ್ಯವಹಾರವಾಗಿರುವುದೆಂದು ದೂರು ಇದ್ದು ಆದರೆ, ಈ ಕ್ರಿಯಾಯೋಜನೆಯ ಕಾಮಗಾರಿಗಳು ಜಿಲ್ಲಾ ಪಂಚಾಯಿತಿಯಲ್ಲಿ ಅನುಮೋದನೆಗೊಂಡ ನಂತರ ಅಂದಾಜು

ಪತ್ರಿಕೆಯನ್ನು ತಯಾರಿಸಿ ಗ್ರಾಮ ಪಂಚಾಯಿತಿಯಿಂದ ಆಡಳಿತ್ಮಾತಕ ಹಾಗೂ ಜಿಲ್ಲಾ ಪಂಚಾಯಿತಿಯ ತಾಂತ್ರಿಕ ಅನುಮೋದನೆ ಪಡೆದ ನಂತರ ಕಾಮಗಾರಿಗನ್ನು 60% ಕೂಲಿಕಾರ್ಮಿಕರಿಗಾಗಿ, 40% ಸಲಕರಣೆಗಳಿಗಾಗಿ ಅನುಪಾತದಲ್ಲಿ ಅಂದಾಜು ಪತ್ರಿಕೆಯ ಪ್ರಕಾರ ಎಲ್ಲಾ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆಂದು ಹೇಳಿರುತ್ತಾರೆ. ಹಾಗೂ,

21. ರಸ್ತೆ ನಿರ್ಮಾಣಗಳನ್ನು ಮಾಡಲಾಗಿದೆಯೆಂದು ಚೆಕ್ ಡ್ಯಾಂ ಗಳನ್ನು ಮತ್ತು ತಗ್ಗು ಮುಚ್ಚುವ ಕಾಮಗಾರಿಗಳನ್ನು ಅಂದಾಜು ಪತ್ರಿಕೆಯನ್ವಯ ಮಾಡಲಾಗಿದೆಯೆಂದು , ಎಲ್ಲಾ ತರಹ ಕಾಮಗಾರಿಗಳನ್ನು ಮಾಡಿದ ನಂತರ ಪಂಚಾಯತ್ ಪಿಡಿಓ ಮತ್ತು ಗ್ರಾಮಪಂಚಾಯಿತಿಯ ಅಧ್ಯಕ್ಷರು ಚಪ್ಪಟ್ಲಾ ಹಾಗೂ ಯಾದಗಿರಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಪರಿವೀಕ್ಷಣೆ ಮಾಡಿದ ನಂತರ ಬಿಲ್ಲುಗಳನ್ನು ಪಾವತಿ ಮಾಡಲಾಗಿದೆಯೆಂದು ಹೇಳಿರುತ್ತಾರೆ.

22. **ದಾಖಲೆ ಹಾಜರುಪಡಿಸಲು 4ನೇ ಎದುರುದಾರರಾದ ಶ್ರೀ ಶರಣಪ್ಪ , ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯಿತಿ ಕಛೇರಿ, ಯಾದಗಿರಿ ಇವರು ದಿ:17.1.2020ರಲ್ಲಿ ಕಾಲಾವಕಾಶಕೇಳಿದ್ದರೂ, ಇದುವರೆಗೂ ಯಾವುದೇ ದಾಖಲಾತಿಗಳನ್ನು ಈ ಮೇಲೆ ನಮೂದಿಸಿರುವ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಹಾಜರುಪಡಿಸಿರುವುದಿಲ್ಲ. ಮೇಲಾಗಿ ದೂರಿನ ಆರೋಪಣೆಗಳಿಗೆ ಸಂಬಂಧಿಸಿದಂತೆ ಇವರು ನಿರ್ದಿಷ್ಟವಾಗಿ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಸಹ ಒದಗಿಸಿರುವುದಿಲ್ಲ. ಮೇಲೆ ನಮೂದಿಸಿರುವ ಅವಧಿಯಲ್ಲಿ ಇವರು ಸದರಿ ಕಾಮಗಾರಿಗಳನ್ನು ನಿರ್ವಹಿಸಿರುತ್ತೇವೆಂದು ಹೇಳಿದ್ದು ಈ ಬಗ್ಗೆ ಅಂದರೆ ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.**

23. 2ನೇ ಎದುರುದಾರರು – ಶ್ರೀ ವೆಂಕಟಪ್ಪ, ಚಪ್ಪೆಟ್ಲಾ ಗ್ರಾಮಪಂಚಾಯಿತಿಯ ಅಧ್ಯಕ್ಷರಿದ್ದು 5ನೇ ಎದುರುದಾರರಾದ ಶ್ರೀಮತಿ ಬಸಮ್ಮರವರು ಇದೇ ಗ್ರಾಮಪಂಚಾಯಿತಿಯ ಹಿಂದಿನ ಅಧ್ಯಕ್ಷರಿದ್ದು, 3ನೇ ಎದುರುದಾರರಾದ ಶ್ರೀ ಭೀಮಾರೆಡ್ಡಿ ಯವರು ಗ್ರಾಮಪಂಚಾಯಿತಿಯ ಕಾರ್ಯದರ್ಶಿ ಇದ್ದು ಇವರುಗಳ ವಿರುದ್ದ ಸಹಾ ಮೇಲಿನ ಎಲ್ಲಾ ಅರೋಪಗಳನ್ನು ಫಿರ್ಯಾದಿನಲ್ಲಿ ನಮೂದಿಸಿದ್ದು ಇವರುಗಳು ಯಾವುದೇ

ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ ಹಾಗೂ ಈ ಆರೋಪಗಳನ್ನು ಅಲ್ಲಗೆಳೆದಿರುವುದಿಲ್ಲ. ಇವರುಗಳ ವಿರುದ್ಧ ಫಿರ್ಯಾದಿನಲ್ಲಿ ಮಾಡಿರುವ ಆರೋಪಗಳನ್ನು ಇವರುಗಳು ಒಪ್ಪಿರುತ್ತಾರೆಂದು ಭಾವಿಸಬಹುದಾಗಿದೆ.

24. ಆದ್ದರಿಂದ, ಮೇಲ್ಕಂಡ ಎದುರುದಾರರುಗಳಾದ 2ರಿಂದ 5ರವರು ಕರ್ತವ್ಯಲೋಪವೆಸಗಿದ್ದು , ಚಪ್ಪಟ್ಲ ಗ್ರಾಮಪಂಚಾಯಿತಿಗೆ ಮಂಜೂರಾದ ಯೋಜನೆಗಳಾದ, ಅಂದರೆ 2009-10 ಹಾಗೂ 2010-11ನೇ ಸಾಲಿನ ಯಾದಗಿರಿ ತಾಲ್ಲೂಕಿನ ಚಪ್ಪೆಟ್ಲಾ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಜರುಗಿಸಲಾದ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಗಳಲ್ಲಿ ಅವ್ಯವಹಾರವೆಸಗಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

25. ಮೇಲ್ಕಂಡ ವರದಿಯಲ್ಲಿ, 1ನೇ ಎದುರುದಾರರಾದ ಚೆಪೇಟ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ **ನೃಪತುಂಗಚಾರ್ಯರವರು ದಿ: 27.7.2013ರಂದು ಮೃತಪಟ್ಟಿರುತ್ತಾರೆ ಹಾಗೂ** 6ನೇ ಎದುರುದಾರರಾದ –ಶ್ರೀ ಚುಕ್ಕಪ್ಪ, ಇವರು ಹಿಂದೆ ಯಾದಗಿರಿ ತಾಲ್ಲೂಕು ಪಂಚಾಯಿತಿಯ ಸದಸ್ಯರಾಗಿದ್ದರೆಂದು ನಮೂದು ಇದ್ದು ಇವರು ದಿ: 9.6.2019ರಂದು ಮೃತಪಟ್ಟಿರುತ್ತಾರೆ. **ಆದ್ದರಿಂದ ಮೇಲೆ ನಮೂದಿಸಿರುವ 2ರಿಂದ 5ನೇ ಎದುರುದಾರರ ವಿರುದ್ಧ ಮಾಡುವ ವಿಚಾರಣೆಯಲ್ಲಿ, 1 ಮತ್ತು 6ನೇ ಎದುರುದಾರರಿಗೆ ಸಂಬಂಧಪಟ್ಟಂತೆ ಹಣ ದುರುಪಯೋಗದ ಬಗ್ಗೆ ಕಂಡುಬಂದಲ್ಲಿ ಇವರುಗಳ ಆಸ್ತಿಗೆ ಸಂಬಂಧಿಸಿದಂತೆ ಕಾನೂನಿನ್ವಯ ಕ್ರಮತೆಗೆದುಕೊಳ್ಳಲು ಸಂಬಂಧಿಸಿದ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.**

26. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, 2 ರಿಂದ 5 ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

27. ಶ್ರೀ ವೆಂಕಟಪ್ಪ, ಅಧ್ಯಕ್ಷರು, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು, 2ನೇ ಎದುರುದಾರರು, ಶ್ರೀ ಭೀಮಾರೆಡ್ಡಿ, ಕಾರ್ಯದರ್ಶಿ, ಚಪ್ಪೆಟ್ಲಾ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, 3ನೇ ಎದುರುದಾರರು, ಶ್ರೀ ಶರಣಪ್ಪ, ಸಹಾಯಕ

ಅಭಿಯಂತರರು, ಜಿ.ಪಂ. ಕಛೇರಿ ಯಾದಗಿರಿ. 4ನೇ ಎದುರುದಾರರು, ಮತ್ತು ಶ್ರೀಮತಿ ಬಸಮ್ಮ, ಹಿಂದಿನ ಅಧ್ಯಕ್ಷರು, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು, 5ನೇ ಎದುರುದಾರರು ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ತಮ್ಮ ಕರ್ತವ್ಯಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ಸಿ.ಸಿ.ಎ) ನಿಯಮ 1966 ರ ನಿಯಮ 3(1) (ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 2 ಮತ್ತು 3ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ. ಹಾಗೂ ಶ್ರೀ ವೆಂಕಟಪ್ಪ, ಅಧ್ಯಕ್ಷರು, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು, 2ನೇ ಎದುರುದಾರರು ಮತ್ತು ಶ್ರೀಮತಿ ಬಸಮ್ಮ, ಹಿಂದಿನ ಅಧ್ಯಕ್ಷರು, ಚಪ್ಪೆಟ್ಲಾ ಗ್ರಾಮಪಂಚಾಯಿತಿ, ಯಾದಗಿರಿ ತಾಲ್ಲೂಕು, 5ನೇ ಎದುರುದಾರರು ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಯನ್ವಯ ಪ್ರದತ್ತವಾದ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಶಿಫಾರಸ್ಸು ಮಾಡಲಾಗಿದೆ.

28. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ <u>ಮೂರು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

29/3

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು–1,
ಕರ್ನಾಟಕ ರಾಜ್ಯ, ಬೆಂಗಳೂರು.